KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER:
DATE: 05/08/2020

# ಉಪಕರಣ ಖರೀದಿಯ ವಿಶೇಷ ಆಡಿಟ್

**ಸಂ.ಕ.ಸಮಾಚಾರ ಬೆಂಗಳೂರು** ಕೊರೊನಾ ಉಪಕರಣ ಹಾಗೂ ಔಷಧ ಖರೀದಿ ಸಂಬಂಧ ಸಮಗ್ರ ಹಣಕಾಸಿನ ಖರ್ಚು ವೆಚ್ಚಗಳ ಕುರಿತು ಅಕೌಂಟೆಂಟ್ ಜನರಲ್ ಅವರಿಂದ ವಿಶೇಷ ಆಡಿಟ್ ಮಾಡಿಸಲು ತೀರ್ಮಾನಿಸಲಾಗಿದೆ ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ಎಚ್.ಕೆ. ಪಾಟೀಲ ತಿಳಿಸಿದ್ದಾರೆ.

ಮಂಗಳವಾರ ನಡೆದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದು ತಿಂಗಳ ಒಳಗಾಗಿ ವಿಶೇಷ ಆಡಿಟ್ ಮಾಡಿ ಲೆಕ್ಕಪತ್ರ ಸಮಿತಿಗೆ ವರದಿ ನೀಡುವಂತೆ ಸೂಚಿಸಲಾಗಿದೆ. ಯಾವ ಯಾವ ಸಂದರ್ಭದಲ್ಲಿ ಏನೇನು ಖರೀದಿಯಾಗಿದೆ ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೀಡಿರುವ ವರದಿಯ ಬಳಿಕ ಹಲವಾರು ಉಪಪ್ರಶ್ನೆಗಳು, ಸ್ಪಷ್ಟೀಕರಣಗಳು, ಸಂಶಯಗಳ ಸಂಬಂಧ ಇನ್ನಷ್ಟು ಮಾಹಿತಿ ಕೇಳಿದ್ದೇವೆ ಎಂದರು.

